ಕಥೆ

# ಹೊಸ ದಾರಿ



**ಮಿತ್ರಾ ವೆಂಕಟ್ರಾಜ**

ಕಲೆ: ವಿಶ್ವನಾಥ್ ಎ.ಎಸ್.

ಕಾನೂನು ಕಾಲೇಜಿನ ಸಹಪಾಠಿಗಳ ಇಪ್ಪತ್ತೈದನೇ ವರ್ಷದ ಒಕ್ಕೂಟಕ್ಕೆಂದು ಬೆಂಗಳೂರಿಗೆ ವಿಮಾನದಲ್ಲಿ ಪಯಣಿಸುತ್ತಿದ್ದ ಪಾರ್ಥನು ದಾರಿಯುದ್ದಕ್ಕೂ ತನ್ನ ಆಫೀಸಿನ ಕಡತಗಳನ್ನು, ವ್ಯವಹಾರದ ಕಾಗದಪತ್ರಗಳನ್ನು ನೋಡುವುದರಲ್ಲೇ ಮಗ್ನನಾಗಿದ್ದ. ಅವನ ಕೆಲಸದ ಕಾರೋಬಾರುಗಳು ಎಷ್ಟು ಹಿಗ್ಗಿದ್ದವೆಂದರೆ ಅವನಿಗೆ ಪುರುಸೊತ್ತೇ ಇರುತ್ತಿರಲಿಲ್ಲ. ಈ ಇಪ್ಪತ್ತೈದು ವರ್ಷಗಳನ್ನು ಮೀರಿ ಅವನು ಬೆಳೆದಿದ್ದ. ಒಮ್ಮೆ ಬದುಕಿಗೆ ಧುಮುಕಿದ ಮೇಲೆ ಕಾಲೇಜಿನ ದಿನಗಳು ನೆನಪಿನ ಅಂಚಿಗೆ ಹೋಗಿಬಿಟ್ಟಿದ್ದವು.

ಇದ್ದಕ್ಕಿದ್ದಂತೆ ಬಂದ ಇಮೇಲ್‌ನಿಂದ ಕಾಲೇಜು ಮುಗಿಸಿ ಇಪ್ಪತ್ತೈದು ವರ್ಷಗಳು ಕಳೆದುವೆಂಬುದು ನೆನಪಾಗುವಂತಾಗಿತ್ತು. ಒಬ್ಬಿಬ್ಬರು ಉಮೇದು ಮಾಡಿ ಎಲ್ಲರನ್ನೂ ಸಂಪರ್ಕಿಸಿ ಕಾರ್ಯಕ್ರಮ ರೂಪಿಸಿದ್ದರು. ಕಾಗದ ಬಂದಾಗ ಖುಷಿಯಾಗಿ, ಕೂಡಲೇ ಕಾರ್ಯಕ್ರಮದ ಏರ್ಪಾಡಿಗೆ ತನ್ನ ದೇಣಿಗೆಯೆಂದು ಇಪ್ಪತ್ತೈದು ಸಾವಿರದ ಚೆಕ್ಕನ್ನು ಕಳಿಸಿಕೊಟ್ಟಿದ್ದ. ಮತ್ತೆನ ದಿನಗಳಲ್ಲಿ ಕೆಲಸದ ಆರ್ಭಟದಿಂದಾಗಿ ಆ ವಿಚಾರ ತಲೆಯಿಂದ ಸಂಪೂರ್ಣ ಮರೆಯಾಗಿತ್ತು. ಒಕ್ಕೂಟದ ಹಿಂದಿನ ದಿನ ಅವನ ಗುಮಾಸ್ತರು ಮರುದಿನದ ಬೆಂಗಳೂರು-ಪ್ರಯಾಣವನ್ನು ನೆನಪಿಸಿದಾಗ 'ಯಾಕೆ?...' ಎಂದು ಕೇಳುವಂತಾಗಿತ್ತು.

ಎಪ್ಪತ್ತರ ತರಗತಿಯ ಬೆಳ್ಳಿಹಬ್ಬದ ಕಾರ್ಯಕ್ರಮವನ್ನು ಅವರು ಕಲಿತ ಬೆಂಗಳೂರಿನ ಪ್ರಸಿದ್ಧ ಕಾನೂನು ಕಾಲೇಜಿನ ಸಭಾಂಗಣದಲ್ಲೇ ಆಯೋಜಿಸಿದ್ದರು. ಮೊದಲನೇ ದಿನದ ಬಹುಭಾಗವು ಎಲ್ಲರನ್ನು ಭೇಟಿಯಾಗಿ ಮಾತುಕತೆಯಾಡುವುದರಲ್ಲೇ ಕಳೆಯಿತು. ಉಡುಪಿಯಲ್ಲಿ ಬಿ.ಎಸ್ಸಿ. ಮಾಡುತ್ತಿದ್ದಾಗಲೂ, ಮುಂದೆ ಕಾನೂನು ಕಾಲೇಜಿನಲ್ಲಿದ್ದಾಗಲೂ ಅನ್ಯೋನ್ಯವಾಗಿದ್ದ ಗೆಳೆಯ ಸುರೇಶನೊಡನೆ ಪಾರ್ಥನ ಹೆಚ್ಚಿನ ಮಾತುಕತೆ ನಡೆದಿತ್ತು.

ಆ ಪುನರ್ಮಿಲನದಲ್ಲಿ ಒತ್ತಾಯದ ಹಳಹಳಿಕೆಯಂತೂ ಇದ್ದೇ ಇತ್ತು. ಪ್ರತಿಯೊಬ್ಬರೂ ಉಳಿದವರಲ್ಲಿ ಇಪ್ಪತ್ತೈದು ವರ್ಷಗಳ ಹಿಂದಿನ ವ್ಯಕ್ತಿತ್ವದ ಕೆಲವಾದರೂ ಅಂಶಗಳು ಸಿಗಬಹುದೇನೋ ಎಂದು ಹುಡುಕಲು ಒದ್ದಾಡುತ್ತಿದ್ದಂತಿತ್ತು.

ಕೆಲವರು ಹೆಚ್ಚು ಬದಲಾಗದಿದ್ದರೂ, ಇನ್ನು ಕೆಲವರು ಗುರುತು ಸಿಗದಷ್ಟು ಬದಲಾಯಿಸಿದ್ದರು. ಕೆಲವರ ಹೊಟ್ಟೆ ದಪ್ಪಗಾಗಿದ್ದರೆ, ಉಳಿದ ಕೆಲವರಿಗೆ ಬಕ್ಕತನದ ಆಕ್ರಮಣವಾಗಿ ತಲೆಕೂದಲು ಹಿಂದೆ ಸರಿಯುತ್ತ ಹೋಗಿತ್ತು. ಹೆಚ್ಚಿನವರಿಗೆ ಅಲ್ಲಲ್ಲಿ ಕೂದಲು